# ಕಾನನ

ಜೂನ್ 2018

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

ನಿಸರ್ಗದೆಡೆಗೆ ಪಯಣ



ಮುಖಪುಟ

Fan-throated Lizard

© ಪೃಥ್ವಿ .ಬಿ ಮೈಸೂರು

ಜೂನ್ 2018

WCG
Wildlife Conservation Group

## ಲೇಖನಗಳು


* ಹಾವಿನ ಸಂಬಂಧಿಯಲ್ಲ, ಆದರೂ ಹಾವು ರಾಣಿ! – ಶಶಿಧರಸ್ವಾಮಿ ಆರ್. ಹಿರೇಮಠ
* ಭೀಕರ ಆಕರ್ಷಣೆಗಳು: ಉರಗಪ್ರೇಮಿಗಳಿಂದ ಸಂತ್ರಸ್ತರವರೆಗೂ – ಡಾ. ದೀಪಕ್ ಭದ್ರಶೆಟ್ಟಿ
* ಕೊಳೆತ ಗ್ರಹ! – ಜೈಕುಮಾರ್ .ಆರ್
* ಮೋಡಗಳು (ಕವನ) – ನಂದಕುಮಾರ್ ಹೊಳ್ಳ .ಎಸ್
* ಪ್ರಕೃತಿ ಬಿಂಬ – ಶಂಕರಪ್ಪ .ಕೆ .ಪಿ


© ಪೃಥ್ವಿ .ಬಿ ಮೈಸೂರು




**ವಿನ್ಯಾಸ**
ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**
ಪೃಥ್ವಿ .ಬಿ ಮೈಸೂರು

**ಪರಿಷ್ಕರಣೆ**
ಮುರಳಿ .ಎಸ್
ಅನನ್ಯರೂಪ

**ಕರಡು ತಿದ್ದುಪಡಿ**
ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು

# ಬಾಡುಬಕ್ಕ

**ಸಾಮಾನ್ಯ ಹೆಸರು: Indian Redwing**

**ವೈಜ್ಞಾನಿಕ ಹೆಸರು: *Pterolobium hexapetalum***



© ಡಬ್ಲ್ಯೂ ಸಿ ಜಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

"ಬಾಡುಬಕ್ಕ" (ಇಂಡಿಯನ್ ರೆಡ್ವಿಂಗ್) ಎಂಬ ಪೊದೆಯನ್ನು ನೀವೂ ಹಳ್ಳಿಗಳಕಡೆ ನೋಡಿರಬಹುದು. "ಬಾಡು" ಎಂದರೆ ಮಾಂಸ "ಬಕ್ಕ" ಎಂದರೆ ಬಕ್ಷಿಸು ಎಂದು. ಈ ಪೊದೆಯಲ್ಲಿನ ಮುಳ್ಳುಗಳು ಮೀನಿನ ಗಾಳದಂತೆ ಕೊಕ್ಕೆಯಾಗಿದ್ದು, ನಮ್ಮ ಚರ್ಮಕ್ಕೆ ಚುಚ್ಚಿದರೆ ಮಾಂಸ ಕಿತ್ತುಬರುತ್ತದೆ. ಮುಳ್ಳು ಹೇಗೆ ಚುಚ್ಚುತ್ತದೋ ಹಾಗೆಯೇ ನಿಧಾನವಾಗಿ ಹಿಂದಕ್ಕೆ ತೆಗೆದುಕೊಂಡರೆ ಮಾತ್ರ ಬಿಡಿಸಿಕೊಳ್ಳಲೂ ಸಾಧ್ಯ, ಇಲ್ಲವಾದರೆ ಅದರಿಂದ ಬಿಡಿಸಿಕೊಳ್ಳಲು ಕಷ್ಟವಾಗುತ್ತದೆ. ಇದೊಂದು ಎಲೆ ಉದುರುವ ಕುರುಚಲು ಪ್ರದೇಶದಲ್ಲಿ ಪ್ರಧಾನವಾಗಿ ಬೆಳೆಯುವಂತಹ ದೊಡ್ಡದಾದ ಕವಲೊಡೆಯುವ ಪೊದೆ. ಮಾರ್ಚ್-ಏಪ್ರಿಲ್ ತಿಂಗಳುಗಳಲ್ಲಿ ಹಳದಿ ಬಿಳಿಯ ಗೊಂಚಲು ಗೊಂಚಲು ಹೂ ಬಿಡುವ ಸಸ್ಯ. ಇದು ದಕ್ಷಿಣ ಭಾರತದ ದಖನ್ ಪ್ರಸ್ಥಭೂಮಿಯಲ್ಲಿ ಪ್ರಮುಖವಾಗಿ ಜೇನ್ನೊಣಗಳಿಗೆ ಮಕರಂದ ನೀಡುವ ಸಸ್ಯ.



# ಹಾವಿನ ಸಂಬಂಧವಿಲ್ಲ, ಆದರೂ ಹಾವು ರಾಣಿ!

### ನಾಗ ರಾಜರೇ ಬೇರೆ, ಹಾವುರಾಣಿಯರೇ ಬೇರೆ

ನಾಗರ ಹಾವು, ಹಾವು ಸಂತತಿಯ ರಾಜ ಎಂದು ಕರೆದರೆ, ಹಾವುರಾಣಿ ಎಂದು ಕರೆವ ಹಲ್ಲಿ ಪ್ರಭೇದದ ಈ ಜೀವಿ ನೋಡಲಿಕ್ಕೆ ಮನೋಹರವಾಗಿರುತ್ತದೆ. ಹಾವುರಾಣಿ ಎಂದು ಕರೆವ ಇದು ಎಲ್ಲಿಯೂ ಕೂಡ ಹಾವಿನೊಂದಿಗಿದ್ದು ಬದುಕಿದ, ಮಿಲನ ಕೂಟದಲ್ಲಿ ತೊಡಗಿದ ಉದಾಹರಣೆಗಳಿಲ್ಲ. ನೆಲದ ಮೇಲೆ, ಕಲ್ಲಿನ ಸಂದುಗಳಲ್ಲಿ ಕಂಡು ಬರುವ ಇವು ನಿಸರ್ಗ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಹಾವುರಾಣಿಗಳ ಮೈ ಬಣ್ಣ ಹೊಳಪು ಕಂದು, ನೀಳವಾದ ಚಪ್ಪಟೆ ದೇಹ, ಬೆನ್ನು ಕಂಚು ವರ್ಣ, ಅಲ್ಲಲ್ಲಿ ಚುಕ್ಕೆಗಳಿವೆ. ಕಣ್ಣಿನಿಂದ ಬಾಲದವರೆಗೆ ಒಂದು ಪಟ್ಟಿ ಇದೆ. ದೇಹದ ಮೇಲೆ ಒಂದೇ ರೀತಿಯ, ಒಂದೇ ಗಾತ್ರದ ಉರುಪೆಗಳಿವೆ. ಉರುಪೆಗಳಿಂದ ಆವೃತವಾದ ಕೆಳ ಕಣ್ಣಿಗೆ ರೆಪ್ಪೆ ಇದೆ. ನಾಲ್ಕು ಕಾಲುಗಳಿದ್ದು ಪ್ರತಿಯೊಂದು ಕಾಲುಗಳು ಐದು ಬೆರಳುಗಳನ್ನು ಹೊಂದಿವೆ. ಕುತ್ತಿಗೆಯು ಅತೀ ಸಣ್ಣದು, ಮೂತಿ ಉದ್ದವಾಗಿದೆ. ವೃತ್ತಾಕಾರದ ತೆರದ ಕಿವಿಗಳು ಮತ್ತು ಕೆಂಪಾದ ಕಣ್ಣುಗಳಿವೆ.

### ಶತ್ರುವಿನಿಂದ ತಪ್ಪಿಸಿಕೊಳ್ಳುವ ಚತುರ

ಉದ್ದವಾದ ಹಾಗೂ ಚಪ್ಪಟೆಯಾದ ಬಾಲವು ತುದಿಯಲ್ಲಿ ಕ್ಷೀಣಿಸಿ ಮೊನಚಾಗಿದೆ. ಶತ್ರು ಪ್ರಾಣಿ ಅಟ್ಟಿಸಿಕೊಂಡು ಬಂದು ಹಿಡಿದಾಗ, ಬಾಲವು ತುಂಡಾಗಿ ಬಿದ್ದು ವಿಲಿವಿಲಿ ಒದ್ದಾಡುತ್ತಾ ಶತ್ರುವನ್ನು ವಂಚಿಸಿ ತನ್ನ ಜೀವ ಉಳಿಸಿಕೊಂಡು ಓಡಿ ಹೋಗಿ ಬಚಾವಾಗುತ್ತವೆ. ತುಂಡಾದ ಬಾಲವು ಕಾಲಾನಂತರ ಮತ್ತೆ ದೇಹದಿಂದ ಬೆಳವಣಿಗೆ ಹೊಂದುತ್ತದೆ.

ಇವು ಮಾನವನ ಸಹ ಜೀವಿಗಳಾಗಿದ್ದು ಕಾಡಿನಲ್ಲಿ ಇರುವಷ್ಟೇ ನಿರ್ಭಯವಾಗಿ ಜನ ವಸತಿ ಪ್ರದೇಶಗಳಲ್ಲಿ ನೆಲದ ಮೇಲೆ ಓಡಾಡುವ ದಿವಾಚರಿ ಜೀವಿಗಳಾಗಿವೆ. ಸಾಮಾನ್ಯವಾಗಿ ಇವು ಕೀಟಾಹಾರಿಗಳಾಗಿವೆ. ಹಗಲಿನಲ್ಲಿ ಆಹಾರ ಅನ್ವೇಷಣೆಯಲ್ಲಿ ತೊಡಗುವ ಇವು ಮನೆ ಒಳಗೂ ಬರುವುದುಂಟು.





### ಸುರಂಗ ಮಾರ್ಗ ರಚಿಸುವ ಇಂಜಿನಿಯರ್

ಸ್ವಭಾವತಃ ನೆಲವನ್ನು ಕೆದರುವುದು ಹಾಗೂ ಅಗೆಯುವುದನ್ನು ತುಂಬಾ ಇಷ್ಟಪಡುವ ಇವು ಬಹುತೇಕ ಸಮಯವನ್ನು ನೆಲದಡಿ ಕಳೆಯುತ್ತವೆ. ಇವು ಶತ್ರುಗಳಿಂದ ರಕ್ಷಿಸಿಕೊಳ್ಳಲು ಕೆಲವೊಮ್ಮೆ ಸುಲಭ ಸಂಚಾರಕ್ಕಾಗಿ ಸುರಂಗ ಮಾರ್ಗವನ್ನು ರಚಿಸಿಕೊಂಡಿರುತ್ತವೆ. ಬೇಟೆ ಇರುವಿಕೆಯನ್ನು ನಾಲಿಗೆಯ ಮುಖಾಂತರ ಪತ್ತೆ ಮಾಡಿ ಬೇಟೆಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ನುಂಗಿಹಾಕುತ್ತದೆ. ತೆರೆದ ಜಾಗದ ಕಲ್ಲುಗಳ ಮೇಲೆ ಕುಳಿತು ಬಿಸಿಲು ಕಾಯಿಸುತ್ತವೆ. ಶತ್ರುಗಳ ದರ್ಶನವಾದರೆ ಪಟ್ಟನೆ ಕಲ್ಲು ಸಂದುಗಳಲ್ಲಿ ಅಡಗಿಕೊಳ್ಳುತ್ತವೆ.

### ವಿಸ್ಮಯದ ಸಂತಾನಾಭಿವೃದ್ಧಿ

ಇವುಗಳ ಸಂತಾನಾಭಿವೃದ್ಧಿಯ ಕಾಲವು ಅಕ್ಟೋಬರ್-ಡಿಸೆಂಬರ್ ತಿಂಗಳ ಅವಧಿ. ಇವು ಅಂಡೋತ್ಪಾದಕಗಳಾಗಿವೆ. ಹೆಣ್ಣು ಹಾವುರಾಣಿಯಲ್ಲಿ ಪುರುಷಾಣುಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಅನುಕೂಲವಿದೆ ಹಾಗಾಗಿ ಒಂದು ವರ್ಷದಲ್ಲಿ ಒಂದೇ ಬಾರಿ ಒಮ್ಮೆಗೆ 2 ರಿಂದ 20ರ ತಂಡದಲ್ಲಿ ತಾವು ರಚಿಸುವ ರಂಧ್ರದ ಬಿಲದಲ್ಲಿ ಅಥವಾ ನೈಸರ್ಗಿಕವಾಗಿ ರಂಧ್ರದ ಬಿಲವಿರುವಲ್ಲಿ ಮೊಟ್ಟೆಗಳನ್ನಿಡುತ್ತವೆ. ಗೂಡಿರುವ ಪ್ರದೇಶದಲ್ಲಿ ತಾಯಿ ಕಾವಲಿರುತ್ತದೆ.

### ಅಪಾಯದಂಚಿನಲ್ಲಿ ಕೆಲ ಪ್ರಭೇದಗಳು


ಹಾವುರಾಣಿಗಳನ್ನು ಆಂಗ್ಲಭಾಷೆಯಲ್ಲಿ ಸ್ಕಿಂಕ್ (Skink) ಎಂದು ಕರೆದು ಸರಿಸೃಪ (Reptilia) ವರ್ಗದ ಉರುಪೆ ಸರಿಸೃಪಗಳ ಸ್ಕ್ವಾಮಾಟಾ (Squamata) ಗಣದ ಸಿನ್ಸಿಡೇ (Scincidae) ಕುಟುಂಬಕ್ಕೆ ಸೇರಿಸಿ ಭಾರತದಲ್ಲಿ ಯುಟ್ರೋಪಿಸ್ ಕ್ಯಾರಿನಾಟಾ (Eutropis carinata), ಯುಟ್ರೋಪಿಸ್ ಮೆಕುಲಾರಿಯಾ (Eutropis macularia), ಯುಟ್ರೋಪಿಸ್ ಕ್ವಾಡ್ರಿಕ್ಯಾರಿನಾಟಾ (Eutropis quadricarinata), ಯುಟ್ರೋಪಿಸ್ ಬೆಡ್ಡೊಮಿ (Eutropis beddomii), ಯುಟ್ರೋಪಿಸ್ ಟ್ರಿವಿಟ್ಟಾಟ (Eutropis trivittata), ಯುಟ್ರೋಪಿಸ್ ಬೈಬ್ರೋನಿ (Eutropis bibronii) ಎಂಬ ಆರು ಪ್ರಭೇದಗಳಿದ್ದು ಇದರಲ್ಲಿ ಯೂ. ಟ್ರಿವಿಟ್ಟಾಟ (E trivittata), ಮತ್ತು ಯೂ. ಬೈಬ್ರೋನಿ (E bibronii) ಪ್ರಭೇದಗಳು ವಿನಾಶದಂಚಿನಲ್ಲಿವೆ.

### ವಾರವಿಲ್ಲದ ದಿನ ಕಚ್ಚುವ ರೈತ ಮಿತ್ರರು

ಇದರ ವಿಷವು ಹಾವಿನಂತೆ ಹೆಚ್ಚು ವಿಷಕಾರಿಯಾಗಿದ್ದು ವಾರವಿಲ್ಲದ ದಿನ ಕಚ್ಚಲು ದೇವರು ಇವಕ್ಕೆ ಹೇಳಿದ್ದಾನಂತೆ. ಅದಕ್ಕಾಗಿ ಇವು ಮಾನವರಿಗೆ ಕಚ್ಚುವುದಿಲ್ಲ ಎಂದು ಜನಪದರ ನಂಬಿಕೆ ಇದೆ. ಆದರೆ ಇವು ವೈಜ್ಞಾನಿಕವಾಗಿ ವಿಷಕಾರಿಗಳಲ್ಲ. ವಿವಿಧ ಕೀಟಗಳನ್ನು ಭಕ್ಷಿಸಿ ರೈತಮಿತ್ರರಾಗಿವೆ.



ಛಾಯಾಚಿತ್ರ-ಲೇಖನ
ಶಶಿಧರಸ್ವಾಮಿ ಆರ್. ಹಿರೇಮಠ
ಕದರಮಂಡಲಗಿ





# ಭೀಕರ ಆಕರ್ಷಣೆಗಳು: ಉರಗಪ್ರೇಮಿಗಳಿಂದ ಸಂತ್ರಸ್ತರವರೆಗೂ

ಕೆಲವು ತಿಂಗಳುಗಳ ಹಿಂದೆ ಸಾಮಾಜಿಕ ಜಾಲಾತಾಣದಲ್ಲಿ ಒಬ್ಬ ಉರಗಪ್ರೇಮಿಯ ಸಾವಿನ ಬಗ್ಗೆ ಓದಿದೆ. ದೈನಂದಿನ ಮಾಧ್ಯಮಗಳು "ಹಾವುಗಳು ಅವನ ಉರಗಪ್ರೇಮವನ್ನು ಅರ್ಥಮಾಡಿಕೊಳ್ಳಲೇ ಇಲ್ಲ ಬದಲಿಗೆ ಅವನ ಸಾವಿಗೆ ಕಾರಣವಾದವು" ಎಂದು ಬಿಂಬಿಸಿದವು. ಇದು ನನ್ನನ್ನು ಯೋಚನೆಗೀಡುಮಾಡಿತು, ಉರಗ ಪ್ರೇಮ ಎಂದರೇನು, ಕಾಳಿಂಗ ಸರ್ಪ ಅಥವಾ ಕೊಳಕುಮಂಡಲದಂಥ ವಿಷಕಾರಿ ಹಾವುಗಳನ್ನು ಎತ್ತಿಕೊಂಡು ಮುದ್ದು ಮಾಡುವುದೆ? ಖಂಡಿತ ಅಲ್ಲ. ಹಾವು ವಿಷಕಾರಿ ಜಂತು , ಹಾವಿನೊಂದಿಗಿರುವ ಪ್ರತಿಕ್ಷಣವೂ ಅಪಾಯಕಾರಿ, ಬೆಂಕಿಯ ಮುಂದೆ ಸುಡದ ಹಾಗೆ ಎಷ್ಟು ಮುತುವರ್ಜಿ ವಹಿಸುತ್ತೇವೆಯೋ, ಹಾವುಗಳೊಡನೆಯೂ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಮುತುವರ್ಜಿವಹಿಸುವುದು ನಮಗೆ ಕ್ಷೇಮಕರ. ಸ್ವಲ್ಪ ಎಡವಟ್ಟಾದರೂ ಹಾವನ್ನು ನಿರ್ವಹಿಸುವ ವ್ಯಕ್ತಿ ಹಾಗೂ ಸುತ್ತಲಿರುವ ಜನರಿಗೆ ಅಪಾಯ ಕಟ್ಟಿಟ್ಟ ಬುತ್ತಿ.

ಗುಜರಾತಿನ ಬರೋಡಾ ನಿವಾಸಿಯಾದ ಅಶ್ವಿನ್ ಡಿಸೆಂಬರ್ 3, 2013ರಂದು ಹಾವಿನ ಕಡಿತದಿಂದ ಸಾವನ್ನಪ್ಪಿದ. Indiansnakes.org ನ ಸಕ್ರಿಯ ಸದ್ದಸ್ಯನಾಗಿದ್ದ ನಾನು ತಕ್ಷಣ ಪ್ರಸಿದ್ಧಿಹೊಂದಲಾಗುವ ನೂರಾರು ಉರಗಪ್ರೇಮಿಗಳನ್ನು ಎಚ್ಚರಿಸುವುದು ನನ್ನ ಉದ್ದೇಶ. ಭಾರತದಲ್ಲಿ ಮೊದಲು ಹಾವುಗಳನ್ನು ಕಂಡೊಡನೆ ಹಾವಾಡಿಗರನ್ನು ಕರೆದು ತಮ್ಮ ಸುತ್ತಲಿರುವಹಾವುಗಳನ್ನು ಹಿಡಿಸುತ್ತಿದ್ದರು. ಮೊದಲು ಹಾವಾಡಿಗರ ಸಂಖ್ಯೆಯೂ ಕಡಿಮೆ ಇತ್ತು ಹಾಗು ಸಾಮಾಜಿಕ ಮಾಧ್ಯಮವೂ ಇರಲಿಲ್ಲ. ಬದಲಾದ ಸನ್ನಿವೇಶಗಳಿಂದ ಇಂದು ಒಬ್ಬ ವ್ಯಕ್ತಿಯು



ವಿಷಕಾರಿ ಹಾವನ್ನು ಹಿಡಿದು ನಿಂತಿರುವ ಒಂದು ಛಾಯಾಚಿತ್ರವಿದ್ದರೆ ಸಾಮಾಜಿಕ ಮಾಧ್ಯಮಗಳಲ್ಲಿ ಅವರು ಹೀರೊ ಆಗಿಬಿಡುತ್ತಾರೆ ಹಾಗೂ ಜನರ ವಿಚಿತ್ರ ಪ್ರಶಂಸೆ ನುಡಿಗಳು ಇರುತ್ತವೆ.

ಹಾವಾಡಿಗರು ಕೆಲವೇ ಕೆಲ ಜನ ಇರುತ್ತಿದ್ದರಾದರೆ, ಉರಗಪ್ರೇಮಿಗಳು ಅಸಂಖ್ಯಾತರಿರುವರು. ಕೆಲವರು ತಾವು ಪರಿಣಿತ ಉರಗ ತಜ್ಞರು ಎಂದು ತೋರಿಸಹೋಗಿ ಜೀವಕಳೆದುಕೊಂಡಿದ್ದಾರೆ ಅಥವಾ ಹಾವು ಕಚ್ಚಿದ ಕೈ/ಕಾಲು ಹೀಮೊಟಾಕ್ಸಿನ್ ಪ್ರಭಾವಕ್ಕೆ ಕೊಳೆತು ಹೋಗಿದೆ.



ಇಂದು ಹಾವುಗಳಿಗೆ ಮಾನವೀಯ ಮೌಲ್ಯಗಳನ್ನು ಆರೋಪಿಸುವ ಉರಗಪ್ರೇಮಿಗಳಿಗೆ ಹಾವುಗಳನ್ನುಕಾಪಾಡುವ ಬಗ್ಗೆ ಸರಿಯಾದ ಮಾಹಿತಿನೀಡಬೇಕಿದೆ. ಯಾವ ಸಂದರ್ಭದಲ್ಲಿ ಮನುಷ್ಯ ಹಾವುಗಳನ್ನು ಕಾಪಾಡಲು ಸಜ್ಜಾಗಬೇಕೆನ್ನುವುದು ಬಲು ಮುಖ್ಯ. ಹೇಗೆ ಒಬ್ಬವೈದ್ಯ ಆಪರೇಷನ್ ಮಾಡುವುದನ್ನು ಅನಿವಾರ್ಯ ಎಂದು ತೀರ್ಮಾನಿಸುತ್ತಾನೋ ಹಾಗೆ ಹಾವನ್ನು ಹಿಡಿದು ಸೂಕ್ತ ಸ್ಥಳಕ್ಕೆ ಸಾಗಿಸಬೇಕು. ಮಾನವ ಜೀವಕ್ಕೆ ಯಾ ಹಾವಿನ ಜೀವಕ್ಕೆ ಅಪಾಯವಿದೆ ಎನ್ನುವ ಸಂದರ್ಭಗಳಲ್ಲಿ ಮಾತ್ರ ಹಾವುಗಳನ್ನು ಮನುಷ್ಯನ ಆವಾಸ ಸ್ಥಾನದಿಂದ ಹಿಡಿದು ಹಾವಿನ ಆವಾಸದಲ್ಲಿ ಬಿಡಬೇಕು.









ಈದಿನ ಪ್ರಾಣಿಪಕ್ಷಿಗಳೊಂದಿಗೆ ಛಾಯಾಚಿತ್ರ ತೆಗೆಸಿಕೊಳ್ಳುವ ವಿಕೃತ ರೋಗಿಗಳಿಂದ ವನ್ಯಮೃಗಗಳಿಗೆ ಉರಗಗಳಿಗೆ ಮುಕ್ತಿಬೇಕಿದೆ. ಒಂದು ಅತ್ಯುತ್ತಮ ಛಾಯಾಚಿತ್ರಕ್ಕಾಗಿ ಹಾವುಗಳನ್ನು ಬಿಲಗಳಿಂದ ಹೊರಗೆಳೆದು ತಮಗೆ ಸುಂದರವೆನಿಸುವ ಹಿನ್ನೆಲೆಯಲ್ಲಿರಿಸಿ, ಕ್ಯಾಮೆರ ಸರಿಮಾಡಿಕೊಂಡು ಅಲ್ಲೇ ಹೋಗುತ್ತಿದ್ದ ಹಾವನ್ನು ಕಾಪಾಡಿದಂತೆ ಚಿತ್ರೀಕರಿಸಿಕೊಂಡು ಹಾವಿನ ರಕ್ಷಣೆ ಎಂದು ಕರೆಯುತ್ತಾರೆ. ಆದರಿಂದ ಅವರ ಸಾಮಾಜಿಕ ಮಾಧ್ಯಮಗಳಲ್ಲಿ ವರ್ಚಸ್ಸು ಹೆಚ್ಚಾಗುತ್ತದೆ ಎಂಬ ನಂಬಿಕೆ. (ಈ ರೀತಿ ಮಾಡುವುದು ಅಪ್ರಭುದ್ಧ ಹಾಗೂ ಹೊಟ್ಟೆತುಂಬಿರುವ ಲಕ್ಷಣಗಳು). ಈ ಸಾಮಾಜಿಕ ಮಾಧ್ಯಮದ ಕೆಟ್ಟೆದೆಯ ಕಲಿಗಳನ್ನು ಮಟ್ಟಹಾಕಲು ಕಾನೂನಿನ ಸದ್ಬಳಕೆಯಾಗಬೇಕು. ಕಾನೂನಿಲ್ಲದಿದ್ದರೆ ಕಾನೂನನ್ನು ರೂಪಿಸಬೇಕು. ಜನಸಾಮಾನ್ಯರು ಇಂಥ ಚಿತ್ರಗಳನ್ನು ಪ್ರೋತ್ಸಾಹಿಸುವ ಬದಲು ಅರಣ್ಯ ಇಲಾಖೆಗೆ ದೂರುನೀಡಿ ಇಂಥ ವಿಕೃತರನ್ನು ಜೀವಮುಖಿಯಾಗಿ ಪರಿವರ್ತಿಸಬೇಕು. ಮುಂದಿನ ದಿನಗಳಲ್ಲಿ ಇಂಥಚಿತ್ರಗಳು ನಮಗೆ ನೋಡಲು ಸಿಗಬಾರದು.




**ಮೂಲ ಲೇಖನ:** ಪ್ರಿಯಾಂಕಾ ಕದಮ್

**ಕನ್ನಡಕ್ಕೆ ಅನುವಾದ:** ಡಾ.ದೀಪಕ್ ಭದ್ರಶೆಟ್ಟಿ



# ಕೊಳೆತ ಗ್ರಹ!

"ಕೊನೆಗೂ ಪ್ರಶಸ್ತಿ ಸಿಗಲೇ ಇಲ್ಲ ಛೇ... " ಎಂದುಕೊಂಡು ಹಿಂತಿರುಗಬೇಕಾಯಿತು .

ಹೀಗಂದುಕೊಂಡಿದ್ದು ನಾನು ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ. ಅಂದು ಶಾಲಾ ವಾರ್ಷಿಕೋತ್ಸವ ಪ್ರಯುಕ್ತ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಎಲ್ಲರಂತೆ ನಾನು ಉತ್ಸುಕನಾಗಿದ್ದೆ. ಇಲ್ಲಾ, ಹಿಂದಿನ ವರ್ಷ ಚಿತ್ರಕಲೆಯಲ್ಲಿ ಪ್ರಶಸ್ತಿ ನನಗೇ ಬಂದಿದ್ದರಿಂದ ಎಲ್ಲರಿಗಿಂತ ಹೆಚ್ಚು ಉತ್ಸುಕನಾಗಿ ಕಾಯುತ್ತಿದ್ದೆ. ಸ್ಪರ್ಧೆ ಇದ್ದರೂ ಕೂಡಾ ಎಂದಿನಂತೆ ತರಗತಿಗಳು-ಪಾಠಗಳು ಇದ್ದೇ ಇದ್ದವು. 'ಏನಪ್ಪಾ ಇವರು ಇಂತಹ ದಿನಗಳಲ್ಲಾದರು ರಜೆ ಕೊಡಬಾರದಿತ್ತೆ?' ಎಂದು ಮನಸಿನಲ್ಲಿ ಕೂಗು ಪದೇ-ಪದೇ ಕೇಳಿ ಬರುತ್ತಿದ್ದರೂ, ಅದಕ್ಕಿಂತ ಚಿತ್ರಕಲೆ ಮತ್ತು ಪ್ರಶಸ್ತಿ ಬಗೆಗಿನ ಗಮನ ಹೆಚ್ಚಿದ್ದರಿಂದ ಪರವಾಗಿಲ್ಲ ಅಂದುಕೊಂಡೆ.






ಸ್ಪರ್ಧೆ ಮಧ್ಯಾಹ್ನ ಊಟದ ನಂತರ ಇತ್ತು, ಎಂದಿನಂತೆ ಆ ದಿನವೂ ಒಂದು ಮುದ್ದೆ ತಿಂದು ಡೈನಿಂಗ್ ಹಾಲ್ ನಿಂದ  ಬರುವಾಗ ನನ್ನ ಸ್ನೇಹಿತರೆಲ್ಲ ದೊಡ್ಡಸ್ವಾಮೀಜಿಯ ಬಳಿ ಹೋಗಿ ಯಾವುದೋ ರೀತಿಯ ಅರೆಪಾರದರ್ಶಕ ಹಸಿರು ಮಾತ್ರೆಯನ್ನು ಕೈಯಲ್ಲಿ ಹಿಡಿದು ಏನೇನೋ ಮಾತನಾಡಿಕೊಂಡು ಅಲೆಯುತ್ತಿದ್ದರು.


ಕುತೂಹಲ ತಾಳದೆ ಒಬ್ಬನನ್ನು ಹಿಡಿದು ಕೇಳಿದೆ 'ಲೋ... ಏನೋ ಇದು ಹೀಗಿದೆ?' ಎಂದು.  ಅದಕ್ಕೆ ಅವನು 'ಮಗಾ ಇದು ಮೀನು ಮಾತ್ರೆ ಇದನ್ನು ತಿಂದರೆ ಬುದ್ಧಿ ಜಾಸ್ತಿ ಬರುತ್ತೆ'. ಎಂದೊಡನೆ ನನ್ನ ಕಾಲುಗಳು ನನ್ನ ಅನುಮತಿಗೆ ಕಾಯದೆ ಸ್ವಾಮೀಜಿಯ ಬಳಿಗೆ ಕರೆದೊಯ್ದು, ನನ್ನ ಕೈಯನ್ನು ಚಾಚಿ ಒಂದು ಮಾತ್ರೆ ತೆಗೆದುಕೊಳ್ಳುವಂತೆ ಮಾಡಿತು. ನಂತರದ ಕಾರ್ಯಕ್ರಮ ಚಿತ್ರಕಲೆ ಆದ್ದರಿಂದ ಉಪಯೋಗವಾಗಬಹುದೆ ಅಂದುಕೊಂಡೆ.



ಹೀಗೆ ಮಾತ್ರೆ ತೆಗೆದುಕೊಂಡು ಬರುವಾಗ ನನ್ನ ತಲೆ ಸುಮ್ಮನಿರದೆ ಹೇಳಿತು 'ಲೋ... ಏನೋ ಇದು ಹೀಗಿದೆ? ಹಸಿರು ಅರೆಪಾರದರ್ಶಕ ಮಾತ್ರೆ? ಒಮ್ಮೆ ಇದನ್ನು ಪೀಸ್ ಮಾಡಿ ನೋಡಬೇಕು ಅನಿಸ್ತಿಲ್ವಾ??' ಎಂದು .

ಹೌದಲ್ಲ ಎನಿಸಿ ಅದರೊಳಗೆ ಏನಿದೆ ಎಂದು ಅರಿಯಲು ಎಷ್ಟೋ ಪ್ರಯತ್ನ ಪಟ್ಟೆ. ಆದರೆ ರಬ್ಬರ್ ನಂತಿದ್ದ ಅದು ನನಗೆ ಪೈಲ್ವಾನನಂತೆ ಸವಾಲನ್ನೊಡ್ಡಿತು. ಸೋಲೊಪ್ಪಿಕೊಳ್ಳಲು ಇಷ್ಟವಿರದ ನಾನೂ ಸಹ ಬಿಡದೆ ಪ್ರಯತ್ನಿಸುತ್ತಿದ್ದೆ. ಅಷ್ಟರಲ್ಲಿ 'ಸ್ಪರ್ಧೆ ಸಮಯ' ಎಂದು ಎಚ್ಚರಿಕೆಯ ಬೆಲ್ ಬಾರಿಸಿತು, ಅವಸರದಲ್ಲಿ ಅದನ್ನು ನನ್ನ ಅಂಗಿಯ ಜೇಬಿಗೆ ಇಳಿಸಿ ಓಡಿದೆ.

ಬಂದು ಸ್ಪರ್ಧೆಗೆ ಸಾಲಾಗಿ ಕೂತು ಹಾಳೆಯಲ್ಲಿ ಇನ್ನೇನು ಚಿತ್ರ ಬಿಡಿಸಬೇಕು ಅನ್ನುವಷ್ಟರಲ್ಲಿ ಎಲ್ಲೋ ಎಂದೂ ಕಾಣದ ಕೆಟ್ಟ ವಾಸನೆ ಬರಲಾರಂಭಿಸಿತು. ಕೊಳೆತ ಮೊಟ್ಟೆ ದುರ್ಗಂಧದಂತಿತ್ತು ಆ ವಾಸನೆ. ಆಚೀಚೆ ಒಮ್ಮೆ ಕಣ್ಣಾಯಿಸಿದೆ, ಕಣ್ಣು ತನ್ನ ಕೆಲಸ ದೃಷ್ಟಿಯ ಗ್ರಹಿಕೆ ಎಂಬುದನ್ನು ಮರೆತು, ಮೂಗಿನ ಕೆಲಸದಲ್ಲಿ ಮೂಗು ತೂರಿಸದ್ದಕ್ಕೋ ಏನೋ ಎಂತಹ ಸುಳಿವು ಸಿಗಲಿಲ್ಲ. ಮತ್ತೆ ತಲೆ ತಗ್ಗಿಸಿ ಬರೆಯಲು ಹೋದೆ ಮತ್ತದೇ ದುರ್ಗಂಧ. ಈಗ ಮೂಗು ತನ್ನ ಕೆಲಸವನ್ನು ತಾನು ನಿಷ್ಠೆಯಿಂದ ಮಾಡುತ್ತಿರುವ ನಿದರ್ಶನವಾಗಿ ಆ ದುರ್ಗಂಧದ ತೀವ್ರತೆಯು ಹೆಚ್ಚಾಗಿರುವುದನ್ನು ಚೆನ್ನಾಗಿಯೇ ಗ್ರಹಿಸಿತು. ಆಗ ಒಮ್ಮೆ ನನ್ನ ಜೇಬಿಗೆ ಕಡೆಗೆ ಕಣ್ಣು ಹೋಯಿತು. ಆಗ ತಿಳಿಯಿತು ಇದೆಲ್ಲಾ ಅರೆಪಾರದರ್ಶಕ ಹಸಿರು ಬಣ್ಣದ ಮೀನು ಮಾತ್ರೆ ಮೇಲೆ ನಾನು ನಡೆಸಿದ ಪ್ರಯೋಗದ ಫಲ ಆ ಮಾತ್ರೆ ಯಾವುದೋ ನೂಕು ನುಗ್ಗಲಿನಲ್ಲಿ ತನ್ನ ಸೆರೆಮನೆಯಲ್ಲೇ ಕೊನೆಯುಸಿರೆಳೆದಿದೆ ಎಂದು. ಆ ಸುಗಂಧವನ್ನು ತಾಳಲಾರದೆ. ಸುಮ್ಮನಿರಲಾರದೆ. ಚಿತ್ರವೂ ಬರೆಯಲಾಗದೆ. ಪ್ರಶಸ್ತಿಯು ಕೈ ಬಿಟ್ಟು ಹಾರಿ ಹೋಯಿತು. ನೋಡಿ ಹೀಗೆ ಇಲ್ಲಿ ಆ



ಘಟನೆಯನ್ನು ನೆನಪಿಸಿಕೊಳ್ಳುವಾಗಲೂ ಅದೇ ವಾಸನೆ ಮೂಗಿನ ತುದಿಯಲ್ಲಿ ಬಂದಂತಿದೆ. ಅಬ್ಬಾ..!

ಅದು ಹಳೆಯ ಕಥೆ. ನಮ್ಮ ಸೌರಮಂಡಲದಲ್ಲಿ ಎಂಟು ಪ್ಲಸ್ ಒಂದು ಗ್ರಹ ಇರುವುದು ನಿಮಗೆ ತಿಳಿಯದೆ? ಇವುಗಳಲ್ಲಿ ಹೆಚ್ಚು ಸುಂದರವಾಗಿ ಕಾಣುವ ಗ್ರಹ ನಮ್ಮ ಭೂಮಿ. ಹಾಗೆಯೆ ಯುರೇನಸ್ ಗ್ರಹವೂ ಕೂಡ ಏನು ಕಮ್ಮಿಯಿಲ್ಲ, ಅದರ ಬಣ್ಣ ಎಲ್ಲರ ಮನಸೆಳೆಯುತ್ತದೆ. ಆದರೆ ಈ ಯುರೇನಸ್ ಗ್ರಹದ ಮೇಲೆ ಯಾವ ಭೂಪರು ಹೋಗಿ ಈ ಮೀನಿನ ಮಾತ್ರೆಗಳನ್ನು ಒಡೆದು ಎಸೆದರೋ ತಿಳಿಯದು, ಅಲ್ಲೂ ಅದೇ ವಾಸನೆ. ಹೌದು ರೀ ಸತ್ಯವಾಗಲು... ಚಿತ್ರದಲ್ಲಿಯೇ ಎಲ್ಲರ ಕಣ್ ಸೆಳೆಯುವ ಯುರೇನಸ್ ಗ್ರಹದ ಅಂದ ನೀವು ನೋಡಿರಬಹುದು. ಅಷ್ಟು ಸುಂದರವಾದ ಗ್ರಹದ ಮೇಲಿನ ವಾಸನೆ ಬಲ್ಲಿರೇನು?

ಬೇಡಪ್ಪ ಬೇಡ ಎನ್ನುವಷ್ಟು ದುರ್ವಾಸನೆ ಬೀರುತ್ತದೆಯಂತೆ ಈ ಗ್ರಹ. ಕೊಳೆತ ಮೊಟ್ಟೆಯ ದುರ್ವಾಸನೆಯೇ ತುಂಬಿ ತುಳುಕುತ್ತಿದೆ ಇಲ್ಲಿ. ಛೆ... ಎನಿಸಿದರೂ ಇದು ಸತ್ಯ.

ಹಾಗಾದರೆ ಇದಕ್ಕೆ ಕಾರಣವೇನು?

ಇದಕ್ಕೆ ಉತ್ತರ ಸರಳ ರಸಾಯನ ಶಾಸ್ತ್ರದಲ್ಲಿ ಹುಡುಕಿದಲ್ಲಿ ದೊರೆಯಬಹುದು. ಹಾ... ಹೈಡ್ರೋಜನ್ ಸಲ್ಫೈಡ್ ಯುಕ್ತ ಮೋಡಗಳ ಹೊಂದಿರುವ ಕಾರಣ ಗ್ರಹದ ನಿಜವಾದ ವಾಸನೆ ಬಯಲು ಮಾಡಿದ್ದರೆ ಇಂಗ್ಲೆಂಡ್ ನ ಖಗೋಳ ವಿಜ್ಞಾನಿ ಲೀ ಫ್ಲೆಚೆರ್. ಅವರ ಈ ಸಂಶೋಧನೆಯನ್ನು Gemini North ಎಂಬ ಟೆಲಿಸ್ಕೋಪ್ ಗೆ ಅಳವಡಿಸಲಾಗಿರುವ 'spectrograph' ಎಂಬ ಸಾಧನದಿಂದ ಸಾಧಿಸಲಾಗಿದೆ. ಈ ವಿಷಯ ತುಂಬಾ ಹೊಸತು ಎನಿಸಿದರೂ ಅಷ್ಟು ಹೊಸತೇನಲ್ಲ ಬಿಡಿ ಏಕೆಂದರೆ ಇದೇ ಯುರೇನಸ್ ನಲ್ಲಿ ಹೈಡ್ರೋಜನ್ ಸಲ್ಫೈಡ್ ಇರಬಹುದು




ಎಂದು 1990ರಲ್ಲೇ ವಿಜ್ಞಾನಿಗಳು, ಆ ದಿನಗಳಲ್ಲಿ ಖಗೋಳಯಾನಕ್ಕೆ ಕಳುಹಿಸಿದ್ದ 'Voyager 2' ಎಂಬ ಉಪಗ್ರಹದ ಸಹಾಯದಿಂದ ಊಹಿಸಲಾಗಿತ್ತು. ಅದೇ ವಿಷಯವನ್ನು ಈಗ ಸಾಬೀತು ಮಾಡಲಾಗಿದೆ. ಯುರೇನಸ್ ಗ್ರಹದಲ್ಲಿರುವ ಜಲಜನಕ ಸಲ್ಫೈಡ್ ಮೋಡ ಪಟ್ಟಕಗಳು ಅನಿಲಭರಿತ ಗ್ರಹಗಳಾದ ಗುರು ಹಾಗು ಶನಿ ಗ್ರಹಗಳಿಂದ ಯುರೇನಸ್ ಗ್ರಹವನ್ನು ಬೇರ್ಪಡಿಸುತ್ತದೆ. ಅಷ್ಟೇ ಅಲ್ಲದೇ ಈ ಕೊಳೆತ ಗ್ರಹ ನಮಗೆ ಸೌರವ್ಯೂಹದ ಹುಟ್ಟಿನ ಬಗ್ಗೆ ಕೆಲ ಮಾಹಿತಿಗಳನ್ನು ಬಿಚ್ಚಿಡುತ್ತವೆ ಎನ್ನುತ್ತಾರೆ ಲೀ ಫ್ಲೆಚೆರ್.




ಹೈಡ್ರೋಜನ್ ಸಲ್ಫೈಡ್, ಅಮೋನಿಯಂಗಿಂತ ಕಡಿಮೆ ಉಷ್ಣಾಂಶದಲ್ಲಿ ಹೆಪ್ಪುಗಟ್ಟುತ್ತದೆ ಹಾಗು ಯುರೇನಸ್ ಗ್ರಹದಲ್ಲಿ ಹೈಡ್ರೋಜನ್ ಸಲ್ಫೈಡ್ ಕೇವಲ ಅನಿಲದ ಮೋಡಗಳಷ್ಟೇ ಅಲ್ಲದೆ ಘನ ರೂಪದಲ್ಲಿ ದೊರೆಯಲು ಅಂದರೆ ಇವು ಐಸ್ ಗಡ್ಡೆಗಳಾಗಿ

ದೊರೆಯುತ್ತದೆ. ಈ ಹೈಡ್ರೋಜನ್ ಸಲ್ಫೈಡ್ ಅನಿಲ ಸೂರ್ಯನಿಂದ ಸ್ವಲ್ಪ ಹೆಚ್ಚು ದೂರದಲ್ಲಿ ಇದ್ದರೆ ಮಾತ್ರ ಘನೀಕೃತವಾಗಲು ಸಾಧ್ಯ ಅಲ್ಲವೇ?. ಹಾಗಾದ್ದರಿಂದಲೇ ಇರಬೇಕು ನಮ್ಮ ಅನಿಲ ಕಾಯಗಳಾದ ಗುರು ಮತ್ತು ಶನಿ ಗ್ರಹಗಳಾಚೆ ಯುರೇನುಸ್ ಮತ್ತು ನೆಪ್ಚೂನ್ ನಂತಹ ಹೆಪ್ಪುಗಟ್ಟಿದ ಐಸಿ ಗ್ರಹಗಳಾಗಿರುವುದು. ಇದರಿಂದ ತಿಳಿಯುವುದು ಸೌರಮಂಡಲದ ಒಂದೊಂದು ಗ್ರಹಗಳ ರಚನೆಯ ಶೈಲಿ ಬೇರೆ ಬೇರೆ ರೀತಿಯಲ್ಲಾಗಿವೆ. ಹಾಗು ಬೇರೆ ಬೇರೆ ಮೂಲ ವಸ್ತುಗಳಿಂದಾಗಿದೆ ಎಂದು.

ಹಾಗಾದರೆ ನಮ್ಮ ಭೂಮಿಯಲ್ಲಿನ ಅಪಾರ ಸಂಖ್ಯೆಯ ಜೀವಕೋಟಿ ಹುಟ್ಟಿಕೊಳ್ಳಲು ಭೂಮಿಯ ರಚನೆ ಸೂರ್ಯನಿಂದ ನಿರ್ದಿಷ್ಟ ದೂರ ಮತ್ತು ಜೀವ ಧರಿಸಲು ಶಕ್ತಿ ಇರುವ ಕೆಲ ಮೂಲವಸ್ತುಗಳ ಸಮ್ಮಿಶ್ರಣದಿಂದ ಬಂದಿರಬಹುದು ಎಂಬ ಊಹೆ ನನ್ನದು. ಅಷ್ಟೇ ಅಲ್ಲ ನಮ್ಮ ಜೀವನವೂ ಈ ಗ್ರಹಗಳ ಹಾಗೆಯೇ, ನಮ್ಮಲ್ಲಿನ ಮೂಲವಸ್ತು(ಸದ್ಗುಣ)ಗಳ ನಿರ್ದಿಷ್ಟ ಪ್ರಮಾಣದಂತೆ ನಾವೂ ರೂಪುಗೊಳ್ಳುತ್ತೇವೆ. ಒಂದೇ ವ್ಯತ್ಯಾಸವೆಂದರೆ ನಾವೇ ನಮ್ಮ ಮೂಲವಸ್ತುಗಳನ್ನು ಬದಲಾಯಿಸಬಹುದು ಹಾಗೂ ಗ್ರಹಗಳಿಗೆ ಸಾಧ್ಯವಿಲ್ಲ. !







- ಜೈ ಕುಮಾರ್ .ಆರ್

WCG, ಬೆಂಗಳೂರು

# ಮೋಡಗಳು

ಆಕಾಶದ ಕಡಲಲ್ಲಿ ಅಲೆಯುತಿಹ
ಮೋಡಗಳು
ವಿಶ್ವ ಸುಂದರಿಯಂತೆ ಮಿನುಗುವುದೇಕೆ..?

ಕತ್ತಲೆಯ ಕಾರ್ಮುಗಿಲು ಗುಡು-ಗುಡಿಸಿ ಮಳೆತಂದು
ಆಗೊಮ್ಮೆ ಈಗೊಮ್ಮೆ ನಿಲ್ಲುವುದೇಕೆ...?

ಸೂರ್ಯನನೇ ಮರೆಮಾಡಿ
ತಂಪುಗಾಳಿ ಬರಮಾಡಿ
ದೂರಾತಿ ದೂರಕ್ಕೆ ಸರಿಯುವುದೇಕೆ..?

ಬಿರು ಬಿಸಿಲ ಝಳ ಮುಗಿದು ಮುಂಗಾರಿನ ಆರಂಭಕ್ಕೆ
ನಿನ್ನ ನೋಡಿ ಕಪ್ಪೆಗಳು ಕೂಗುವುದೇಕೆ...?

ಪುಟ್ಟ ಮನದ ಹೃದಯದಲ್ಲಿ ಎಷ್ಟು ದೊಡ್ಡ ಬೆಣ್ಣೆಯೆಂದು ಅಮ್ಮನನ್ನು ಕರೆಯುವಂತೆ ಮಾಡುವಿಯೇಕೆ...?
ಆಗಸದಿ ನಿನ್ನ ಆಟ ರೈತನಿಗೆ ವಿಧಿಯ ಪಾಠ ಯಾವ ರೀತಿ ಕಲಿಸಲೆಂದು
ನೋಡುವಿಯೇಕೆ...?

ಗಿಡಗಳೆಲ್ಲಾ ಸೊರಗಿನಿಂತು ಭೂಮಿಯೆಲ್ಲಾ ಬರಡಾಗಿ
ನೀರಿಗಾಗಿ ಬೇಡುವಾಗ ಓಡುವಿಯೇಕೆ ಮೋಡ ನೀ ಓಡುವಿಯೇಕೆ..?

- ನಂದಕುಮಾರ್ ಹೊಳ್ಳ .ಎಸ್
ಪಾಂಡೇಶ್ವರ, ಸಾಸ್ತಾನ.



# ಪ್ರಕೃತಿ ಬಿಂಬ



**ಕಾಗದ ಕಣಜ** **© ಕೆ. ಎಸ್. ಶ್ರೀನಿವಾಸ್**

ಎಲೆ-ತೊಗಟೆಗಳನ್ನೇ ಅಗಿದು ಕಾಗದದ ಮನೆಕಟ್ಟಿ ಬದುಕುವ ಸಂಘ ಜೀವಿಗಳು ನಾವು. ನೀವು ಕಾಗದವನ್ನು ಕಂಡುಕೊಳ್ಳುವ ಮೊದಲೇ ಕಾಗದದ ಗೂಡು ಕಟ್ಟಿ ಮೊಟ್ಟೆಯಿಟ್ಟು ಸಂಸಾರ ಸಾಗಿಸಿದ್ದೆ. ಎಷ್ಟೇ ಜಡಿಮಳೆ ಬಂದರು ಒಂದು ಹನಿ ನೀರು ನಮ್ಮ ಮನೆಯಲ್ಲಿ ಸೋರುವುದಿಲ್ಲ ಅಂತಹ ವಾಟರ್ ಪ್ರೂಫ್ ಪೇಪರ್‌ನ್ನು ನಾವು ತಯಾರಿಸುತ್ತೇವೆ. ನಮ್ಮ ಮನೆ ನಿಮ್ಮ ಮನೆಗಿಂತ ಕಲಾತ್ಮಕವಾಗಿದೆ




**ಪಚ್ಚೆ ಕಡಜ** **© ಶ್ರೀನಿವಾಸ್ ಕೆ. ಎಸ್.**

ಕಡು ಪಚ್ಚೆಯಂತೆ ಪಳ-ಪಳ ಹೊಳೆಯುವ ಕಡು ನೀಲಿ ಬಣ್ಣದ ಕಡಜ ನಾನು. ಬೇಸಿಗೆಯ ಬಿಸಿಯ ವಾತಾವರಣದಲ್ಲಿ ನನ್ನ ಓಡಾಟ ಜಾಸ್ತಿ. ಕೋಗಿಲೆ ಹೇಗೆ ಕಾಗೆ ಗೂಡಲ್ಲಿ ಮೊಟ್ಟೆ ಇಡುತ್ತೋ ಅದೇ ರೀತಿ ನಾನು ನನ್ನ ಸಂಬಂಧಿಗಳ ಗೂಡಲ್ಲಿ ಮೊಟ್ಟೆ ಇಡುತ್ತೇನೆ. ಉಳಿದಂತೆ ನನ್ನ ಮಕ್ಕಳು ಹುಟ್ಟಿದ ತಕ್ಷಣ ನನ್ನ ಸಂಬಂಧಿಗಳ ಮಕ್ಕಳನ್ನು ಮುಗಿಸುತ್ತಾರೆ. ನಾನು ಒಂಟಿ ಜೀವಿ ದೊಡ್ಡ ಕಣ್ಣುಳ್ಳ ನಮಗೆ ತೇವಯುಕ್ತ ಮರಳು ಮಣ್ಣು ಇಷ್ಟ.



**ಬೆಂಕಿ ದುಂಬಿ** **© ಶ್ರೀನಿವಾಸ್ ಕೆ. ಎಸ್.**

ನನ್ನ ತಂಟೆಗೆ ಬಂದ್ರೆ ಜೋಕೆ ! ಸೆಂಟಾರಿಡಿನ್ ವಿಷ ಬಿಟ್ಟು ಬೊಬ್ಬೆ ಬರಿಸುತ್ತೀನಿ. ಒಂಟಿಯಾಗಿ ಬದುಕೋ ನನಗೆ ತೊಂದ್ರೆ ಕೊಡಬೇಡಿ ಪ್ಲೀಸ್. ಆಗಾಗ ಸ್ವಲ್ಪ ಮಿಡತೆ ಮೊಟ್ಟೆಗಳನ್ನು ಗುಳುಂ ಮಾಡ್ತೀನಿ. ಜೇನು ಹುಳುಗಳು ಕಂಡ್ರೆ ನನಗೆ ಪಂಚಕಜ್ಜಾಯದಂತೆ. ಹೂಗಳ ಹತ್ತಿರ ಕುಳಿತು ಜೇನುಹುಳುಗಳಿಗಾಗಿ ಕಾದು ಬೇಟೆಯಾಡಿ ತಿನ್ನುವ ಮಹಾನ್ ಬೇಟೆಗಾರ ನಾನು.



**ಬಣ್ಣದ ದುಂಬಿ** **© ಶ್ರೀನಿವಾಸ್ ಕೆ. ಎಸ್.**

ಮುಂಗಾರು ಮಳೆಗೆ ಭೂಮಿಯೇ ಬಣ್ಣಮಯ! ಧರೆಗೆ ಉದುರುವ ಹನಿ ಹನಿ ನೀರು ನಮಗೆ ಬಣ್ಣಕೊಡುವ ಕಲೆಗಾರ. ಭೂಮಿಯ ಯಾವುದೆ ಕೊಳೆತ ತಿಪ್ಪೆಯ ಸಗಣಿ ಮಣ್ಣಿನಲ್ಲಿ ಇರುವ ಲಾರ್ವಾ - ಪ್ಯೂಪೆಯಾಗದ ಈ ವರ್ಣ ವೈವಿಧ್ಯ ನೀನಿರುವ ಸುತ್ತಮುತ್ತ ಹುಡುಕಿ ನೋಡು. ನಮ್ಮ ವಂಶದ ನಿಜ ಗತ್ತು ತಿಳಿಯುತ್ತೆ ನಿನಗೆ.

**ಛಾಯಾಚಿತ್ರ:** ಶ್ರೀನಿವಾಸ್ ಕೆ. ಎಸ್.
**ಲೇಖನ :** ಶಂಕರಪ್ಪ .ಕೆ .ಪಿ